RegdNo B G155

(157)

25—3—1965

ಸತ್ಯವಾದಿ

48th Year
Satya vadi
DAILY
MYSORE 4

ಸಂಸ್ಥಾಪಕರು — ಅರಮನೆ ಸಿಂಸ್ಕೃ ಡಾಕ್ಟರ್ ಎಂ ವಿ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ಧಾಳಿಗಾರರು ಹೊದೋ !

ನವದೆಹಲಿ— ಭಾನುವಾರ ಕದನ ವಿರಾಮ ರೇಖೆಯ ನುಂಡಾರ ಸೆಕ್ಟರು ದಾಟಿ ಭಾರತಕ್ಕೆ ನುಗ್ಗಿದ 200 - 300 ಸಶಸ್ತ್ರ ಪಾಕಿಸ್ತಾನಿ ಸೈನಿಕರನ್ನು ನಮ್ಮ ರಕ್ಷಣಾ ಪಡೆಯವರು ಹೊಡೆದೋಡಿಸಿದರು.

ಸ್ವೀಕೃತ ಕಾರ್ಯ

ನವದೆಹಲಿ— ಕಾಶ್ಮೀರದಲ್ಲಿ ಕದನ ವಿರಾಮ ರೇಖೆಯಲ್ಲಿ ವಿಶ್ವಸಂಸ್ಥೆ ವೀಕ್ಷಕರು ಸರಿಯಾಗಿ ನೋಡಿಕೊಳ್ಳುತ್ತಿಲ್ಲವೆಂದು ರಕ್ಷಣಾ ಮಂತ್ರಿಗಳು ಲೋಕಸಭೆಯಲ್ಲಿ ತಿಳಿಸಿದರು — ಮತ್ತು ಧಾಳಿಕಾರರನ್ನು ಓಡಿಸಲು ಕದನ ವಿರಾಮ ರೇಖೆಯನ್ನು ದಾಟಿ ರಕ್ಷಣಾ ಪಡೆಯವರು ಹೋಗಿದ್ದರೆಂದೂ ಹೇಳಿದರು

ಉಗ್ರರಥಶಾಂತಿ ಮಹೋತ್ಸವ

ಬೆಂಗಳೂರು— ಮೈಸೂರು ಸಂಸ್ಥಾನದ ಮಂಜರಾಬಾದ್ ಇಲಾಖೆಯ ವಿಶಾಖಪ್ರಧಾನ ಆಗಮ ಪಂಡಿತರೂ, 'ಧರ್ಮಸಂದೇಶ' ಮಾಸಪತ್ರಿಕಾ ಗೌ|| ಸಂಪಾದಕರೂ ಆದ ಆಗಮಾತಿಲಕ, ಆಗಮವಿಶಾರದ ಶ್ರೀಮಣ್ ಇತ್ಯಾದಿ ಬಿರುದಾಂಕಿತರಾದ ಶ್ರೀ ತಲಕಾಡು ಆಗಮಿಕ ಕೃಷ್ಣದೀಕ್ಷಿತರ ಶಿಷ್ಯರಿಂದ ಪೂರ್ತಿಯಾದಬ್ಬಲಿಯ ಉಗ್ರರಥ ಶಾಂತಿಮಹೋತ್ಸವವು ಶುಕ್ರವಾರ ವೈಭವವಾಗಿ ನೆರವೇರಿಸಲ್ಪಟ್ಟಿತು.

ಪಾದರಸ್ವೀಕಾರ

ಮೈಸೂರು ವಿದ್ಯಾರಣ್ಯಪುರದಲ್ಲಿರುವ ಅಸಿಸ್ಟೆಂಟ್ ಶ್ರೀ ಬಿ. ಗಂಗಾಧರ ಶಾಸ್ತ್ರಿಗಳು ತಾವು ರಚಿಸಿರುವ ಶ್ರೀ ಗಣಪತಿ — ಸುಬ್ರಹ್ಮಣ್ಯ — ಶಿವಪಾರ್ವತಿ ವರ್ಷಫಲ ವರ್ಣಮಾಲಾ ಸ್ತೋತ್ರ (ಪಟ್ಟದ್ದಿ) ಪ್ರತಿಯೊಂದನ್ನು ಕಳುಹಿಸಿರುವುದನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದ್ದೇವೆ.

ಹೆಣ್ಣನ್ನು ಕೀಟಲೆ ಮಾಡಿದ್ದಕ್ಕೆ

ಶಿವಮೊಗ್ಗ— ದೇಶೀಯ ವಿದ್ಯಾಶಾಲೆಯ ವಿದ್ಯಾರ್ಥಿನಿಯೊಬ್ಬಳಿಗೆ ಪ್ರೇಮ ಪತ್ರ ಬರೆದು ದಾರಿಯಲ್ಲಿ ಕೀಟಲೆ ಮಾಡಿದ ಆರೋಪಣೆಗೆ ಮಹಮದ್ ಸುಭಾನಿ ಎಂಬುವನಿಗೆ 1 ತಿಂಗಳು ಕಠಿಣ ಶಿಕ್ಷೆ ವಿಧಿಸಲಾಯಿತು.

ಮುಂದಾಲೋಚನೆ

ಶ್ರೀನಗರ— ಜಮ್ಮು ಕಾಶ್ಮೀರದ ಕದನವಿರಾಮ ರೇಖೆ ಮತ್ತು ಅಂತರ್ರಾಷ್ಟ್ರೀಯ ಗಡಿಯಲ್ಲಿನ ಗ್ರಾಮಗಳನ್ನು ಪಾಕಿಸ್ತಾನ ಖಾಲಿಮಾಡಿಸಿ ಅಲ್ಲಿನ ಗಡ್ಡಿಮುಟ್ಟಿಗಿರುವವರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುತ್ತಿದೆಯೆಂದಲ ವರದಿಯಾಗಿದೆ.

ರಾಷ್ಟ್ರೀಕರಣ

ಬೆಂಗಳೂರು— ಏರ್ಪಡಿಸಿರುವ ಜಿಲೆ ಶಗ್ಗಲು ಆಹಾರಧಾನ್ಯ ರಾಷ್ಟ್ರೀಕರಣ ವಾಗಬೇಕೆಂದು ಅರ್ಥ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆ ಅಭಿಪ್ರಾಯ ವ್ಯಕ್ತ ಪಡಿಸಿದರು

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನವಿದ್ವಾನ್ ಜ್ಯೋತಿರ್ವಿದ್ಯಾವಾಚಸ್ಪತಿ
ರಾಜಕಾರ್ಯಸಚಿವ, ಜ್ಯೋತಿರ್ವಿದ್ಯಾನಿಧಿ
ಸಂಪಕೃ ಕೃಷ್ಣಜೋಯಿಸರಂದ

26 ಗುರುವಾರ ಅಮಾವಾಸ್ಯೆ ಉತ್ತರಾಷಾಢ

ಕಾಂಗ್ರೆಸ್ ಅಧ್ಯಕ್ಷರ ಮನವಿಗೆ ಶಿಷ್ಯ

ಫಾತೇಸಿಂಗರ ತಿರಸ್ಕಾರ

ಪೇ ಕಮಿಷನ್

ಚಾಮರಾಜನಗರ— ಎಲ್ ಜಿ ಓಗಳ ಸಂಬಳ ಇತ್ಯಾದಿ ನಿರ್ಧಾರಕ್ಕೆ ಪೇ ಕಮಿಷನ್ನು ಸ್ಥಾಪನೆಯಾಗಬೇಕೆಂದು ಸಹಕಾರ ಅಧ್ಯಕ್ಷೆ ನೇಮಿದೇವಾಸಿಯಾ ಹೇಳಿದರು.

ಬೆಂಬಲ

ಹೊಸಪೇಟೆ— ಭಾರತ ಸಕ್ಕರೆ ಮತ್ತು ರಿಫೈಸರಿ ಫ್ಯಾಕ್ಟರಿ ಕೆಲಸಗಾರರು ನಡೆಸುತ್ತಿರುವ ಮುಷ್ಕರಕ್ಕೆ ಇನ್ನೂ ಕೆಲ ಕಾರ್ಮಿಕ ಸಂಘಗಳು ಬೆಂಬಲಿಸಿವೆ.

ದ್ರಾಕ್ಷಿ ರಫ್ತು

ತೈವಾನಬಾತು—ಭಾರತದ ಚಪ್ಪರ ದ್ರಾಕ್ಷಿಹಣ್ಣನ್ನು ವಿದೇಶ ಮಾರುಕಟ್ಟೆಗಳಿಗಾಗಿ, ಪ್ರಧಮಿಕ ಸಿಂಗಾಪೂರಿಗೆ ರಫ್ತು ಮಾಡಲಾಗುವುದು.

ಪ್ರತಿಭಟನಾ ಮೆರವಣಿಗೆ

ಶಿವಮೊಗ್ಗ—ಸ್ಥಳೀಯ ಪಡಿತರ ವಿತರಣೆಯಲ್ಲಿ ಕಾಸಿಂ ಎಂಬ ಕೆಲಸಗಾರನನ್ನು ಕೆಗೆದುಹಾಕಿದ್ದನ್ನು ಪ್ರತಿಭಟಿಸಲೂ ಮತ್ತು ಅತನನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತೆ ಒತ್ತಾಯ ಮಾಡಲು ಅಡಿಕೆ ಕಾರ್ಮಿಕರು ಮೊನ್ನೆ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಪಾರಿಸಭಾ ಸದಸ್ಯರೂ ಒಬ್ಬರು !

ಬಳಾರಿ— ಕಳ್ಳತನಕ್ಕಾಗಿ 5 ಮಂದಿ ಬಂಧಿಸಲ್ಪಟ್ಟರು ; ಈ ಸೈಕಿ ಪಾರಿಸಭಾ ಸದಸ್ಯರೂ ಒಬ್ಬರಿದ್ದಾರೆ !

ಅಮೃತಸರ— ಸಂತ ಫತೇ ಸಿಂಗರನ್ನು ಉಪವಾಸ ಮಾಡಬೇಕೆಂದಿರುವ ಯೋಜನೆಯನ್ನು ಕೈಬಿಟ್ಟಬೇಕೆಂದು ಕಾಂಗ್ರೆಸ್ಸು ಅಧ್ಯಕ್ಷ ಕಾಮರಾಜರು ಮಾಡಿದ ಮನವಿಯನ್ನು ಸಿಂಗರು ತಿರಸ್ಕರಿಸಿದರು.

ತಾರಾಸಿಂಗರ ಕಡೆಯಿಂದ ಬೆಂಬಲ

ಲೂಧಿಯಾನ— ಮಾಸ್ಟರ್ ತಾರಾ ಸಿಂಗರ ಪಂಗಡದ ಅಕಾಲಿ ದಳದ ಕಾರ್ಯಕಾರೀ ಸಮಿತಿಯು ಪಂಜಾಬು ಸುಭಾಕ್ಕಾಗಿ ಫತೇಸಿಂಗರ ನಿಲುವು-ಅವಿರಣಾಂತ ಉಪವಾಸ ಮತ್ತು ಪ್ರಾಣಾರ್ಪಣ ಯೋಜನೆಯನ್ನು ಅನುಮೋದಿಸಿತು

ಭಾವೆಯವರ ದಿನ್ಯವಾಣಿ

ಮೊತಮಲ್— ಆಚಾರ್ಯ ಭಾವೆ ಯವರು ಬಹಿರಂಗ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಹೀಗೆ ಹೇಳಿರುವರು— ಅಡಳಿತ ಪಕ್ಷವು ಅನೇಕ ಮುಖ್ಯ ವಿಚಾರದಲ್ಲಿ ಅನಿರ್ಧಾರ ಹೊಂದಿರುವಂತೆ ಕಾಣುತ್ತದೆ ; ಇದರಿಂದ ದೇಶವನ್ನು ಎಡುತಿನುತ್ತಿರುವ ಅನೇಕ ಸಮಸ್ಯೆಯನ್ನು ಪರಿಹರಿಸಲು ಕಾರ್ಯನಿರತ ಮಾರ್ಗ ಅನುಸರಿಸುತ್ತಿಲ್ಲ — ಕೋಟ್ಯಾಂತರ ರೂಗಳ ಖರ್ಚಿನ ಮೂರು ಪ್ರಾಣುಗಳಿಂದ ಧನವಂತರಿಗೆ ಲಾಭವಾಗಿದೆ — ಸ್ವಾತಂತ್ರ್ಯ ನಂತರ ಕಾಂಗ್ರೆಸ್ಸು ಗಾಂಧಿಯವರ ಬುದ್ಧಿವಾದದಂತೆ ನಡೆದು ಬಡಕಾ ಸೇವಾ ಸಂಘದಂತೆ ವರ್ತಿಸಿದ್ದಕೆ ವು ಅನೇಕ ತೊಂದರೆಗಳಿಂದ ಪಾರಾಗುತ್ತಿತ್ತು.

★ ಅಜಾತ ಕಾಶ್ಮೀರ ಅಧ್ಯಕ್ಷರ ಬಂಧನವಾಗಿದೆ.

ಹುಚ್ಚು ಹಿಡಿದ ಉಪಾಧ್ಯಾಯ

ಅಕೋಲ— ಒಬ್ಬ ಉಪಾಧ್ಯಾಯನಿಗೆ ಏಕಾಏಕಿ ಹುಚ್ಚು ಹಿಡಿದು ಚಾಕು ಮತ್ತು ಕೊಡಲಿಯಿಂದ ಐದು ಜನರನ್ನು ತೀವ್ರ ಗಾಯಗೊಳಿಸಿದನು

೦ ೦ ೦

ಕಳಶಗಳ ಹರಾಜು

ಹಾಸನ— ಮುಂದಿನ ವರ್ಷ ಫೆಬ್ರವರಿಯಲ್ಲಿ ಶ್ರವಣಬೆಳಗೊಳದಲ್ಲಿ ನಡೆಯುವ ಮಹಾಮಸ್ತಕಾಭಿಷೇಕದಲ್ಲಿ 1018 ಕಳಶಗಳಲ್ಲಿ 118 ನ್ನು ಹರಾಜು ಮಾಡಿ ಬಾಕಿಯನ್ನು ನಿರ್ಧರಿಸಲಾದ ರೂ 1000, 500, 250 ಕ್ಕೆ ಕೊಡುವಂತೆ ತೀರ್ಮಾನಿಸಲಾಗಿದೆ

೦ ೦ ೦

ಬಲಯುತ ಕಾರ್ಯಕ್ರಮ

ಪಾಕಿಸ್ತಾನದ ಮೇಲೆ ಬಲಯುತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಪಾರ್ಲಿಮೆಂಟಿನಲ್ಲಿ ಸದಸ್ಯರು ಹೇಳಿದರು

೦ ೦ ೦ ೦

ಪಾರ್ಲಿಮೆಂಟಿನಲ್ಲಿಯ ಹೇಳಿಕೆಗಳು

ದೆಹಲಿಯಲ್ಲಿ ದೊಡ್ಡ ಕೂಟಗಳಲ್ಲಿ ಹಾಲಿನಿಂದ ತಯಾರಾದ ಸಿಹಿಯನ್ನು ಹಂಚುವುದು ಪ್ರತಿಬಂಧಿಸಲಾಗಿದೆ — ಕಳೆದ 18 ತಿಂಗಳಿಂದ ತ್ರಿಪುರ-ಪೂರ್ವ ಪಾಕಿಸ್ತಾನ ಗಡಿಯಲ್ಲಿ ಬೇರೆಬೇರೆ ಕಾಲಗಳಲ್ಲಿ 45 ಗಡಿ ಕಂಭಗಳು ತೆಗೆಯಲ್ಪಟ್ಟು 58 ಡ್ಯಾಮೇಜು ಮಾಡಲ್ಪಟ್ಟಿವೆ — ಪಾಕಿಸ್ತಾನವು ಪೂರ್ವ ಪಾಕಿಸ್ತಾನದ ಗಡಿ ಜಿಲ್ಲೆಗಳಿಂದ ಹಿಂದೂಗಳನ್ನು ಅಟ್ಟುತ್ತಿರುವದೆಂದು ಸಂಕಾಂಕ್ಕೆ ಮಂದಿ ಒಂದೆದೆ : ಅಲ್ಲಿಯ ಅಲ್ಪಸಂಖ್ಯಾಕರು ಬಹುಸಂಖ್ಯೆಯಲ್ಲಿ ಭಾರತಕ್ಕೆ ಬಂದಿರುವರು — ಷೇಕ್ ಅಬ್ದುಲ್ಲರ ಡಿಟೆನ್ಷನ್‌ಬಗ್ಗೆ ಪಾಕಿಸ್ತಾನವು ವಿಶ್ವಸಂಸ್ಥೆಗೆ ಪ್ರತಿಭಟನಾಪತ್ರ ಸಲ್ಲಿಸಿತು ; ಇದು ಭಾರತದ ಒಳಾಡಳಿತಕ್ಕೆ ಸಂಬಂಧಿಸಿದ್ದು. ಪಾಕಿಸ್ತಾನಕ್ಕೆ ಈ ವಿಷಯದಲ್ಲಿ ಕೈಹಾಕಲು ಸ್ಥಾನವಾನಾವಲ್ಲ — ಆಕ್ಟೋಬರಿನಿಂದ ಡಿಸೆಂಬರಿನೊಳಗೆ ಅವೇಂಠವು ಭಾರತಕ್ಕೆ 1 ಎಲಿಯು ಟನ್ ಗೋಧಿ ಸಂಬರಾಜು ಮಾಡಲಿದೆ — 1:92 ಆಹಾರ ಶಕ್ತೀರಾಗಳಲ್ಲಿ ವಿಕ್ಷಿ ವಿಧಿಸಲಾಗಿದೆ.

ಆಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀ ದ್ವಾರಕಾ ಜಗದ್ಗುರು ಮಹಾಸನ್ನಿಧಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಿಗಳವರ ಉದಾತ್ತ ಅನುಗ್ರಹ ಕೃಪೆಯಿಂದಾಗಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪಶುಪಾಲನೆ, ಶಾಖಾಹಾರ, ಪಶುವೈದ್ಯ ಎಂಬ ಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 50 ನೈಸೆ

ಪ್ರಾಯೋಜಕರು ರೂ 10 ಪ್ರೋತ್ಸಾಹಕರು ರೂ 25 ; (ಬಿಂಬ) ಸಾದರಪತ್ರ)

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹಕ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು-೪

ವುಡ್‌ಲಾಂಡ್ 20—8—65 ರಿಂದ

ಅಮೋಘ ಅಭಿಲಾಷೆ

ಕಾಬಿಖಾನ್ (ಹಿಂದಿ) Kabli Khan

ಅಜಿತ್, ಹೆಲೆನ್, ಮುಮ್ತಾಜ್, ಪ್ರಯಂತ್ ಪಾತ್ರವಹಿಸಿರುವ

.... ಅತ್ಯಮೋಘ ಹಿಂದಿ ಚಿತ್ರ ....

ಸಂಗೀತ : ಚಿತ್ರಗುಪ್ತ — [ಪ್ರತಿದಿನ 3 ಪ್ರದರ್ಶನಗಳು

ಅಪೆರ— 22-8—65 ರಿಂದ

— ಅಮೋಘ ಕನ್ನಡ ಪೌರಾಣಿಕ ಚಿತ್ರ —

ನಾಗಪೂಜಾ

ನಟವರ್ಗ— ರಾಜಕುಮಾರ್, ಲೀಲಾವತಿ, ರಾಜಶ್ರೀ

SHAKTI SUDHA

A Superb Tonic



Protect the Cow

ಗೋಸಂರಕ್ಷಣೆ ಮುಖ್ಯ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ಸಡೆಯಲಿ

Edited, Printed & Published by Dharmaprachara nirathe
M S Krishna Rao (Proprietor) at the Satyavadi Press
Chamarajapuram, Mysore 4